# ಮಾದರಿ ಪ್ರಶ್ನೆಪತ್ರಿಕೆ- ೬

**ಸಮಯ: 3 ಗಂಟೆಗಳು** **10ನೇ ತರಗತಿ- ಸಮಾಜ ವಿಜ್ಞಾನ** **ಗರಿಷ್ಠ ಅಂಕಗಳು:80**

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರ ಬರೆಯಿರಿ.** **8x1=8**

1. 'ಗುಲಾಮಗಿರಿ' ಗ್ರಂಥವನ್ನು ರಚಿಸಿದವರು

A) ದಯಾನಂದ ಸರಸ್ವತಿ B) ಜ್ಯೋತಿಭಾ ಫುಲೆ C) ಎಂ.ಜಿ.ರಾನಡೆ D) ಸ್ವಾಮಿ ವಿವೇಕಾನಂದರು

2. ಸರ್ದಾರ್ ವಲ್ಲಭಬಾಯಿ ಪಟೇಲರನ್ನು "ಭಾರತದ ಉಕ್ಕಿನ ಮನುಷ್ಯ" ಎಂದು ಕರೆಯುತ್ತಾರೆ. ಏಕೆಂದರೆ

A) ಸ್ವಾತಂತ್ರ್ಯ ಹೋರಾಟಕ್ಕೆ ಜನರನ್ನು ಸಂಘಟಿಸಿದ್ದರಿಂದ B) ಮೊದಲ ಗೃಹಮಂತ್ರಿಗಳಾಗಿದ್ದರಿಂದ.

C) ದೇಶೀಯ ಸಂಸ್ಥಾನಗಳನ್ನು ವಿಲೀನಗೊಳಿಸಿದ್ದರಿಂದ D) ಜಾತಿ ಪದ್ಧತಿಯನ್ನು ವಿರೋಧಿಸಿದ್ದರಿಂದ.

3. ಭಾರತದ ಭಿಲಾಯಿ ಉಕ್ಕಿನ ಕಾರ್ಖಾನೆ ಸ್ಥಾಪನೆಗೆ ಈ ದೇಶವು ಸಹಕರಿಸಿತು

A) ಅಮೇರಿಕ B) ರಷ್ಯಾ C) ಫ್ರಾನ್ಸ್ D) ಚೀನಾ

4. ಅಸ್ಪೃಶ್ಯತೆಯನ್ನು ಹಿಂದೂ ಸಮಾಜಕ್ಕೆ ಹತ್ತಿದ ಕಳಂಕ ಎಂದವರು

A) ಡಾ.ಬಿ.ಆರ್.ಅಂಬೇಡ್ಕರ್ B) ತಿಲಕ್ C) ಅನಿಸೆಂಟ್ D) ಮಹಾತ್ಮ ಗಾಂಧೀಜಿ

5. 14 ವರ್ಷಕ್ಕೂ ಕಿರಿಯ ವಯಸ್ಸಿನ ಮಕ್ಕಳನ್ನು ದುಡಿಮೆಗೆ ನೇಮಿಸುವುದು ಶಿಕ್ಷಾರ್ಹ ಅಪರಾಧ ಎಂದು ಘೋಷಿಸಿರುವ ವಿಧಿ

A) 24 B) 28 C) 16 D) 17

6. ಬಾಕ್ಸೈಟ್ ಅದಿರನ್ನು 'ಅದ್ಭುತ ಲೋಹ' ಎಂದು ಕರೆಯುತ್ತಾರೆ. ಏಕೆಂದರೆ

A) ಅತಿ ಮುಖ್ಯ ಅದಿರಾಗಿದೆ. B) ಹೆಚ್ಚು ಬಳಕೆಯಾಗುವ ಅದಿರಾಗಿದೆ.

C) ವೈವಿಧ್ಯಮಯ ಉಪಯೋಗಗಳಿಗಾಗಿ. D) ಶಾಂತಿ ಮತ್ತು ಯುದ್ಧ ಕಾಲಗಳಲ್ಲಿ ಬಳಸುವುದರಿಂದ.

7. "ಭಾರತಕ್ಕೆ ಯೋಜಿತ ಅರ್ಥವ್ಯವಸ್ಥೆ" ಪುಸ್ತಕವನ್ನು ಬರೆದವರು

A) ಡಾ.ಎಂ.ಎಸ್.ಸ್ವಾಮಿನಾಥನ್ B) ಸರ್. ಎಂ.ವಿಶ್ವೇಶ್ವರಯ್ಯ

C) ಡಾ.ನಾರ್ಮನ್ ಬೋರ್ಲಾಗ್ D) ಸುಂದರಲಾಲ್ ಬಹುಗುಣ

8. ಗ್ರಾಹಕ ಸಂರಕ್ಷಣಾ ಕಾಯ್ದೆ ಜಾರಿಗೆ ಬಂದದ್ದು

A) 1962 B) 2009 C) 1986 D) 2006

**II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **8x1=8**

9. ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಏಕೆ ಸ್ಥಾಪಿಸಲಾಗಿದೆ?

10. ಭಾರತದ ಪರ್ಯಾಯ ಪ್ರಸ್ಥಭೂಮಿಯು ಬೇಸಿಗೆಯಲ್ಲಿ ತಂಪಾಗಿರಲು ಪ್ರಮುಖ ಕಾರಣವೇನು?

11. ಭಾರತದ ಹಣಕಾಸಿನ ವರ್ಷ ಯಾವುದು?

12. ಇಟಲಿಯ ಫ್ಯಾಸಿಸ್ಟ್ ಸರ್ವಾಧಿಕಾರಿಯಾಗಿದ್ದವರು ಯಾರು?

13. ಕಪ್ಪು ಮಣ್ಣು ಒಣ ಬೇಸಾಯಕ್ಕೆ ಅತ್ಯಂತ ಸೂಕ್ತವಾದುದು. ಏಕೆ?

14. ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷರು ಯಾರು?

15. ಕರ್ನಾಟಕ ಸರ್ಕಾರವು 'ಸ್ತ್ರೀ ಶಕ್ತಿ' ಕಾರ್ಯಕ್ರಮವನ್ನು ಏಕೆ ರೂಪಿಸಿದೆ?

16. ದೊಂಬಿ ಎಂದರೇನು?

**III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. 8x2=16**

**17.** ಭಾರತಕ್ಕೆ ಹೊಸ ಜಲಮಾರ್ಗವನ್ನು ಕಂಡುಹಿಡಿಯಲು ಕಾರಣವಾದ ಅಂಶಗಳಾವುವು?

**18.** ಬಳಕೆದಾರರ ಶೋಷಣೆಗೆ ಕಾರಣಗಳಾವುವು?

**19.** ಸುಧಾರಿತ ತಂತ್ರಜ್ಞಾನದ ಬಳಕೆಯಿಂದ ಹಲವು ಬದಲಾವಣೆಗಳಾಗಿವೆ. ಸಮರ್ಥಿಸಿ.

**20.** ಭಾರತ ಮತ್ತು ಅಮೇರಿಕಾ ದೇಶಗಳು ಪ್ರಜಾತಂತ್ರ ದೇಶಗಳಾಗಿದ್ದು, ಇವುಗಳ ಪರಸ್ಪರ ಸೌಹಾರ್ದತೆಯು ಹೇಗಿದೆ ಎಂಬುದನ್ನು ವಿವರಿಸಿ.

**ಅಥವಾ**

'ಶಸ್ತ್ರಾಸ್ತ್ರಗಳ ಪೈಪೋಟಿಯು ಜಗತ್ತಿನ ನಾಶಕ್ಕೆ ನಾಂದಿ.' ಈ ಹಿನ್ನೆಲೆಯಲ್ಲಿ ಶಸ್ತ್ರಾಸ್ತ್ರಗಳ ಪೈಪೋಟಿಯಿಂದಾಗುವ ಪರಿಣಾಮಗಳೇನು?

**21.** ಪಶ್ಚಿಮ ಕರಾವಳಿಯು ಪೂರ್ವ ಕರಾವಳಿಗಿಂತ ಹೇಗೆ ಭಿನ್ನವಾಗಿದೆ?

**22.** ಭಾರತೀಯ ರಾಜ್ಯಗಳನ್ನು ನಿಯಂತ್ರಣದಲ್ಲಿಡಲು ಬ್ರಿಟಿಷರಿಗೆ ಸಹಾಯಕ ಸೈನ್ಯ ಪದ್ಧತಿಯು ಹೇಗೆ ನೆರವಾಯಿತು?

**23.** ನಿರುದ್ಯೋಗ ಸಮಸ್ಯೆಗೆ ಕಾರಣಗಳೇನು? **ಅಥವಾ**

ಪ್ರಮುಖ ಪರಿಸರ ಸಂರಕ್ಷಣಾ ಚಳವಳಿಗಳನ್ನು ಹೆಸರಿಸಿ.

**24.** ನೀತಿ ಆಯೋಗದ ಮುಖ್ಯ ವಿಭಾಗಗಳಾವುವು?

**IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಆರು ವಾಕ್ಯಗಳಲ್ಲಿ ಉತ್ತರಿಸಿ. 9x3=27**

**25.** 1935ರ ಭಾರತ ಸರ್ಕಾರ ಕಾಯ್ದೆಯ ಭಾರತದ ಸಂವಿಧಾನದ ಬುನಾದಿ. ವಿವರಿಸಿ.

**ಅಥವಾ**

ಭಾರತದ ಇತಿಹಾಸದಲ್ಲಿ 19ನೇ ಶತಮಾನವನ್ನು 'ಭಾರತದ ಪುನರುಜ್ಜೀವನ ಕಾಲ'ವೆಂದು ಕರೆಯಲಾಗಿದೆ. ವಿವರಿಸಿ.

**26.** ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರ ಪ್ರಮುಖವಾದುದು. ವಿಶ್ಲೇಷಿಸಿ.

**ಅಥವಾ**

ಕೇಂದ್ರ ಸರ್ಕಾರವು ತೆರಿಗೆಗಳನ್ನು ಹೊರತುಪಡಿಸಿ ಇತರ ಮೂಲಗಳಿಂದಲೂ ಆದಾಯವನ್ನು ಸಂಗ್ರಹಿಸುತ್ತಿದೆ. ಪುಷ್ಠೀಕರಿಸಿ

**27.** ಡಾ.ಬಿ.ಆರ್.ಅಂಬೇಡ್ಕರ್ ರವರ ಕೊಡುಗೆಗಳೇನು?

**28.** ವಿಶ್ವಸಂಸ್ಥೆಯ ಅಂಗಸಂಸ್ಥೆಗಳಾವುವು?

**29.** ಸಂಪರ್ಕದ ಪ್ರಾಮುಖ್ಯತೆಯನ್ನು ಪಟ್ಟಿಮಾಡಿರಿ. **ಅಥವಾ**

ಭೂಬಳಕೆಯ ಪ್ರಕಾರಗಳಾವುವು?

**30.** ಅಸ್ಪೃಶ್ಯತೆಯನ್ನು ತೊಡೆದುಹಾಕಲು ಜಾರಿಗೆ ತಂದಿರುವ ಕಾನೂನು ಕ್ರಮಗಳನ್ನು ವಿವರಿಸಿ.

**31.** 1857ರ ದಂಗೆಗೆ ಆರ್ಥಿಕ ಕಾರಣಗಳೇನು?

**32.** ಬ್ಯಾಂಕು ಖಾತೆ ತೆಗೆಯುವಾಗ ಅನುಸರಿಸಬೇಕಾದ ವಿಧಾನಗಳನ್ನು ತಿಳಿಸಿ. **ಅಥವಾ**

ಉದ್ಯಮಿಯ ಕಾರ್ಯಗಳೇನು?

**33.** ನಿತ್ಯ ಹರಿದ್ವರ್ಣದ ಅರಣ್ಯಗಳು ಹಾಗೂ ಎಲೆಯುದುರಿಸುವ ಮಾನ್ಸೂನ್ ಅರಣ್ಯಗಳ ವ್ಯತ್ಯಾಸಗಳನ್ನು ತಿಳಿಸಿ.

**V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ. 4x4=16**

**34.** ಪ್ರಧಾನಮಂತ್ರಿಯಾಗಿ ಜವಾಹರಲಾಲ್ ನೆಹರೂರವರು ದೇಶಕ್ಕೆ ನೀಡಿದ ಕೊಡುಗೆಗಳನ್ನು ವಿವರಿಸಿ.

**35.** ಪ್ರವಾಹಗಳಿಂದ ಉಂಟಾಗುವ ಪರಿಣಾಮಗಳು ಮತ್ತು ನಿಯಂತ್ರಣ ಕ್ರಮಗಳನ್ನು ತಿಳಿಸಿ.

**36.** 'ಚಿಕ್ಕದೇವರಾಜ ಒಡೆಯರು ಸಮರ್ಥ ಯೋಧರೂ ಹಾಗೂ ಆಡಳಿತಗಾರರೂ ಆಗಿದ್ದರು'. ಸಮರ್ಥಿಸಿ.

**ಅಥವಾ**

ಮೊದಲ ಮಹಾಯುದ್ಧಕ್ಕೆ ಕಾರಣಗಳು ಮತ್ತು ಪರಿಣಾಮಗಳನ್ನು ವಿಶ್ಲೇಷಿಸಿ.

**37.** ಸರ್ಕಾರವು ಅನಕ್ಷರತೆಯ ಸಮಸ್ಯೆಯನ್ನು ಹೋಗಲಾಡಿಸಲು ಕೈಗೊಂಡಿರುವ ಕ್ರಮಗಳಾವುವು?

**VI. 38. ಭಾರತದ ನಕ್ಷೆಯನ್ನು ಬರೆದು ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ. 1+4=5**

ಎ) ಮಾಸಿನ್ ರಾಮ್ ಬಿ) ಗೋವಿಂದಸಾಗರ ಸಿ) ಪಾಕ್ ಜಲಸಂಧಿ ಡಿ) ಗುವಾಹಟಿ